# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 135
ಸದಸ್ಯರ ಹೆಸರು : ಡಾ|| ಉಮಾಶ್ರೀ
( ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 05.03.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಭೂ ಪರಿವರ್ತನೆಯಾಗದೆ ವಾಣಿಜ್ಯ ಉದ್ದೇಶಗಳಿಗೆ ಜಮೀನು ಬಳಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ಎಷ್ಟು ಜಮೀನು ಬಳಕೆ ಮಾಡಲಾಗಿದೆ: ಈ ರೀತಿಯ ಪ್ರಕರಣವನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ: | ಬೇಸಾಯದ ಜಮೀನನ್ನು ಅನುಮತಿ ಇಲ್ಲದೇ ಇತರ ಉದ್ದೇಶಕ್ಕಾಗಿ ಉಪಯೋಗಿಸಿದಲ್ಲಿ ಅದರ ಮೇಲೆ ನಿರ್ಮಿಸಲಾದ ಯಾವುದೇ ಕಟ್ಟಡವನ್ನು ಅಥವಾ ಇತರೆ ನಿರ್ಮಾಣವನ್ನು ಜಿಲ್ಲಾಧಿಕಾರಿಯವರು ಲಿಖಿತ ನೋಟಿಸ್ ಅನ್ನುಕೊಟ್ಟು ತೆಗೆದು ಹಾಕದಿದ್ದರೆ ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ದಂಡವಿಧಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 96ರಡಿ ಅವಕಾಶವಿರುತ್ತದೆ. |
| ಇ) | ಭೂ ಸುರಕ್ಷಾ ಯೋಜನೆಗೆ ಎಷ್ಟು ಅನುದಾನ ನಿಗಧಿಪಡಿಸಲಾಗಿದೆ: ಈ ಅನುದಾನ ಯಾವುದಕ್ಕೆ ಬಳಕೆಯಾಗಿದೆ? (ವಿವರ ನೀಡುವುದು) | ಭೂ ಸುರಕ್ಷಾ ಯೋಜನೆಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನಗಳಿಂದ ನಿರ್ವಹಿಸಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಅನುದಾನ: ರೂ. 38,87,50,000-00<br>ರಾಜ್ಯದ ಅನುದಾನ: ರೂ. 25,00,00,000-00<br>ಒಟ್ಟು: ರೂ. 63,87,50,000-00<br><br>ಈ ಅನುದಾನದಿಂದ ಕಂದಾಯ ದಾಖಲೆಗಳ ಗಣಕೀಕರಣ ಮಾಡಲು ರಾಜ್ಯದ ಎಲ್ಲಾ ತಾಲ್ಲೂಕು ಕಛೇರಿಗಳ ಅಭಿಲೇಖಾಲಯಗಳಿಗೆ, ಅವಶ್ಯಕವಿರುವ ಡೆಸ್ಕ್‌ಟಾಪ್ ಕಂಪ್ಯೂಟರ್, ಓವರ್‌ಹೆಡ್ ಸ್ಕ್ಯಾನರ್, ಡ್ಯೂಪ್ಲೆಕ್ಸ್ ಸ್ಕ್ಯಾನರ್, ಕಂಪ್ಯಾಕ್ಟರ್ ಇವುಗಳನ್ನು ಖರೀದಿಸಲು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳ ವೇತನಕ್ಕಾಗಿ ಹಾಗೂ ಗಣಕೀಕರಣಕ್ಕೆ ಅವಶ್ಯವಿರುವ UPS, CCTV, Networking ಮತ್ತು ಇತರೆ ಕಛೇರಿ ವೆಚ್ಚಗಳಿಗೆ ಇದುವರೆವಿಗೂ ಒಟ್ಟು ರೂ. 40,37,41,100/- ಗಳ ಅನುದಾನ ಬಳಸಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 06 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು